ಹೋಗುವ ಅವರಿಗೆ ಇವೆಲ್ಲವೂ ಮುಖ್ಯವಾದ ಸುದ್ದಿಗಳಾಗಿ ಕಂಡಿರಬೇಕು. 'ಹಣವಂತರಿಗೆ ಹೋಗಿ ಬರಲು ತುಂಬಾ ಊರುಗಳಿವೆಯಲ್ಲ' ಎಂದು ಅಮ್ಮ ಒಮ್ಮೆ ಹೇಳಿದ್ದಳು. ಅದರಲ್ಲೂ ಅವರಿಗೆ ನೆಂಟರು ಬಹಳ. ಅದರಲ್ಲಿ ನಾವು ಒಬ್ಬ ನೆಂಟರೆಂದುಕೊಳ್ಳುವುದು ಸ್ವಲ್ಪ ಹೆಮ್ಮೆಯೇ. ಶ್ರೀಮಂತರೆಂಬುದಕ್ಕಾಗಿ ಅಲ್ಲ. ಅಯಸ್ಕಾಂತದಂತಹ ದನಿ, ಅಪ್ಪತ್ತಾರ ವಾಸನೆಯೂ ಪ್ರೀತಿಯೂ ಕಾರಣ.

ಹಣ ಎಂದ ಕೂಡಲೆ ನೆನಪಿಗೆ ಬರುತ್ತದೆ. ಪ್ರತಿಸಾರಿ ಶೆಂಬಾಯಿಅಪ್ಪತ್ತಾ ಹಣ ತೆಗೆಯುವಾಗ ನೋಡಿದ್ದೇನೆ, ಹೊಸ ಹೊಸತರಹದ 'ಮಣಿಪರ್ಸು'ಗಳನ್ನು. ಅಮ್ಮನಂತೆ ಅಥವಾ ಉಳಿದ ಹೆಂಗಸರಂತೆ, ಪರ್ಸನ್ನು ರವಿಕೆಯ ಒಳಗಿಂದ ತೆಗೆಯುವುದಿಲ್ಲ ಶೆಂಬಾಯಿಅಪ್ಪತ್ತಾ. ಅದಕ್ಕೆಂದೇ ದೊಡ್ಡದಾದ ಪರ್ಸಿನಂತಹ ಚೀಲವನ್ನು ಇಟ್ಟಿರುವರು. ಬಂದ ತಕ್ಷಣ ಅದನ್ನು ಮುಟ್ಟಿ ನೋಡುವುದರಲ್ಲಿ ನನಗೊಂದು ತರಹದ ಕುತೂಹಲ. ಮೃದುವಾಗಿ ಅದರ ಮೇಲುಹೊದಿಕೆ ಇರುವುದು. ಮಾವಿನ ತಳಿರುಗಳನ್ನು ಜೋಡಿಸಿಟ್ಟಂತೆ, ಕುರಿಯ ಉಣ್ಣೆಯ ಮುಟ್ಟಿ ನೋಡಿದಂತೆ ಮೆತ್ತಗೆ ಬುಸ್ಸೆಂದು ಉಬ್ಬಿಕೊಂಡಿರುವುದು ಮಿನುಗುವ ಬಣ್ಣದಲ್ಲಿ. ಆದರೆ ಅಮ್ಮನಿಗೆ ನಾನು ಅದನ್ನು ತೆಗೆಯುವುದೋ, ಮುಟ್ಟುವುದೋ ಹಿಡಿಸದು. ಶೆಂಬಾಯಿಅಪ್ಪತ್ತಾ ನೋಡದಂತೆ ಪಡಕ್ ಅಂತ ಆ ಚೀಲವನ್ನು ನನ್ನಿಂದ ದೂರ ಮಾಡುವಳು. ನಂತರ ದುರುಗುಟ್ಟಿ ನೋಡುವಳು. ನನಗೆ ಅರ್ಥವಾಗಿ ದೂರ ಸರಿಯುವೆ. ನನಗೆ ಆ ಚೀಲ ಬಹಳ ಹಿಡಿಸುವುದು. ನಾನು ದೊಡ್ಡವನಾದ ಮೇಲೆ ಶೆಂಬಾಯಿಅಪ್ಪತ್ತಾರಂತೆ, ಹೀಗೆ ಹಲವು ಚೀಲಗಳನ್ನೂ, ಬಿಳಿಯ ಕರ್ಚೀಫ್ ಅನ್ನು ಕೊಂಡುಕೊಳ್ಳಬೇಕೆಂದು ಅಂದುಕೊಳ್ಳುವೆನು.

ಚೀಲಗಳನ್ನು ಹೊತ್ತುಕೊಂಡು ಶೆಂಬಾಯಿಅಪ್ಪತ್ತಾ ಮನೆಯೊಳಗೆ ಹೋಗುವಾಗ ಯಾರೂ ಬಂದು ಸ್ವಾಗತಿಸುವುದನ್ನು ನಾನು ನೋಡಿಲ್ಲ. ದೊಡ್ಡಮನೆ. ಬಹಳಷ್ಟು ಮಂದಿ ಇರುವರು. ಹೊಸ್ತಿಲು ಮಾತ್ರ ಒಂದೇ. ಅದೂ ಬಹಳ ವಿಶಾಲವಾಗಿ. ಒಳಗೆ ದೊಡ್ಡ ವರಾಂಡ, ಅಂಗಳ. ನಂತರ ಬಿಡಿಬಿಡಿಯಾಗಿ ಕೋಣೆಗಳು ಇರುವುವು. ಒಂದೊಂದರೊಳಗೂ ಯಾರಾದರೂ ಇರುವರು. ಅವರ್‍ಯಾರೂ ಶೆಂಬಾಯಿಅಪ್ಪತ್ತಾರನ್ನು ಭೇಟಿಯಾಗುವುದನ್ನೋ, ಮಾತನಾಡಿಸುವುದನ್ನೋ ನಾನು ಹೆಚ್ಚಾಗಿ ನೋಡಿಲ್ಲ. ಯಾರೋ ಒಂದಿಬ್ಬರು ಹೆಂಗಸರು, ಒಂದೆರಡು ವ್ಯಕ್ತಿಗಳು ಶೆಂಬಾಯಿಅಪ್ಪತ್ತಾ ಬಳಿ ಏನೇನೋ ಹೇಳುವರು. 'ಹಾಲು ತೆಗೆದಿಟ್ಟಿರುವುದಾಗಿಯೋ, ಸ್ಟೌನ ಸೀಮೆಯೆಣ್ಣೆಯ ಬಗ್ಗೆಯೋ, ರೇಷನ್ನಿನಲ್ಲಿ ಸಕ್ಕರೆ ಕೊಂಡುತಂದದ್ದರ ಬಗ್ಗೆಯೋ, ಮತ್ತಷ್ಟು ಮನೆಯ ಸುದ್ದಿಗಳನ್ನು ಹೇಳುವಂತಹ ಮಾತುಗಳು. ಅಮ್ಮನಂತೆ ಅಕ್ಕರೆಯೊಂದಿಗೆ ಸುಖ ದುಃಖ ವಿಚಾರಿಸುವ ಮಾತುಗಳನ್ನು ಅವರ ಮನೆಯಲ್ಲಿ ನಾನು ಕೇಳಿರಲಿಲ್ಲ. ಆ ಮನೆ ನನಗೆ ಇಷ್ಟವಾಗುವುದಿಲ್ಲ. ಆದರೆ, ಸ್ವಲ್ಪ ಸಮಯದಲ್ಲಿ ಹಳೆಯ ಸೀರೆಯನ್ನು ಉಟ್ಟುಬರುವ ಶೆಂಬಾಯಿಅಪ್ಪತ್ತಾ ಜೊತೆಗೆ ಆ ಮನೆಯ ದಕ್ಷಿಣದಲ್ಲಿರುವ ತೋಟಕ್ಕೆ ಹೋಗಲು ಇಷ್ಟ. ಅಪ್ಪತ್ತಾಗೂ ಅದು ಹಿಡಿಸುವುದೇನೋ. ಇಲ್ಲದಿದ್ದರೆ ಯಾತಕ್ಕೆ ಬಂದ ತಕ್ಷಣ ತೋಟಕ್ಕೆ ಹೋಗಬೇಕು?

ಸ್ವಲ್ಪವೂ ವಾತ್ಸಲ್ಯವಿಲ್ಲದ ಮನುಷ್ಯರಿಗಿಂತ ಹಚ್ಚಹಸಿರಾಗಿರುವ ತೋಟ ಎಷ್ಟೋ ಮೇಲು. ಮೆಲ್ಲಗೆ ಹೋಗಿ ಮಲ್ಲಿಗೆಯ ಲತಾಮಂಟಪದ ಬಳಿ ನಿಂತು ಮೌನವಾಗಿ ದಿಟ್ಟಿಸಿ ನೋಡುವರು. ಸುತ್ತಲೂ ಅದರ ಮೇಲೆ ಕಣ್ಣು ಹಾಯಿಸುವರು. ಪಕ್ಕದಲ್ಲಿರುವ ಮಾವಿನಮರದ ಕೆಳಗೆ ಮಾವಿನ ಮಿಡಿಯನ್ನು ಆಯಲು ಹೋಗುವ ನಾನು ಅಲ್ಲಿಂದ ಶೆಂಬಾಯಿಅಪ್ಪತ್ತಾರನ್ನು ನೋಡುವೆನು. ಮಲ್ಲಿಗೆಯ ದೇವತೆಯಂತೆ ಕಾಣುವರು. ಕಾಲಲ್ಲಿ ತೋಟಕ್ಕೆಂದು ಬಳಸುವ